ಸಿ.ಸಿ. ನಂಃ 8/2024

ಪಿ ಡಬ್ಲುಃ 1.

ಸಾಕ್ಷಿಯನ್ನು ದಿನಾಂಕಃ **07-03-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಪಿ ಜಿ ಟಿ., ವಕೀಲರಿಂದಃ**

ಆರೋಪಿತನಿಗೆ ನನ್ನ ಅವಧಿಯಲ್ಲಿ ಸಾಲ ನೀಡಿದ್ದು ಇರುವುದಿಲ್ಲ. ಸಾಲ ನೀಡಬೇಕಾದರೆ ಅಬ್ದುಲ್ ಸತ್ತಾರ್ ಅವರು ಮ್ಯಾನೇಜರ್ ಆಗಿದ್ದರು. ಈ ಪ್ರಕರಣದ ಕುರಿತು ವೈಯಕ್ತಿಕ ಮಾಹಿತಿ ಇಲ್ಲ ಎಂದು ಕೇಳಿದಾಗ ಸಾಕ್ಷಿಯು ಸಾಲದ ದಾಖಲಾತಿ ಬಗ್ಗೆ ನನಗೆ ಮಾಹಿತಿ ಇದೆ ಎಂದು ನುಡಿದಿರುತ್ತಾರೆ. ಸಾಲವನ್ನು ವ್ಯವಹಾರದ ಉದ್ದೇಶಕ್ಕಾಗಿ ನೀಡಿದ್ದೆವು. ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾವು ಅಂಗಡಿ ದಾಖಲೆಯನ್ನು ಪಡೆದಿದ್ದೇವೆ. ನಾವು ಐಟಂ ಪರ್ಚೇಸ್ ಗಾಗಿ ಸಾಲ ನೀಡಿದ್ದೆವು. ಐಟಂಗೆ ಸಂಬಂಧಪಟ್ಟಂತೆ ನಾವು ಯಾವುದೇ ಕೊಟೇಶನ್ ಪಡೆದದ್ದು

ಇರುವುದಿಲ್ಲ. ಆರೋಪಿತನ ಅಂಗಡಿಗೆ ಎಸಿ ಹಾಕುತ್ತಾರೆ ಎಂದು ಹೇಳಿದ್ದರು. ಆರೋಪಿತನು 3 ಲಕ್ಷಕ್ಕೆ ಅರ್ಜಿ ಹಾಕಿದ್ದನು. 2 ಲಕ್ಷದ 40 ಸಾವಿರ ಮಂಜೂರು ಆಗಿತ್ತು. ಸಾಲವನ್ನು ದಿಃ 26-04-2019 ರಲ್ಲಿ ನೀಡಿದ್ದೆವು. ಈ ಸಾಲಕ್ಕೆ ಬಡ್ಡಿ ದರವು 15 ಶೇ. ಆಗಿರುತ್ತದೆ. ಸಾಲ ನೀಡಬೇಕಾದರೆ ಶೇರ್ 5 ಶೇ. ಹಾಗೂ 10 ಶೇ. ಎಫ್ ಡಿಯನ್ನು ಪಡೆದಿದ್ದೆವು. ಸಾಲ ಪಡೆಯುವಾಗ ಅವರು ಹಾಜರುಪಡಿಸಿದ ದಾಖಲೆಯನ್ನು ಹಾಜರುಪಡಿಸಿದ್ದು ಇರುವುದಿಲ್ಲ. ಅವರು ಸಾಲ ಪಡೆದ ನಂತರ ಏನೂ ಹಣವನ್ನು ತುಂಬಿದ್ದು ಇರುವುದಿಲ್ಲ. ಅವರು ಸಾಲ ಪಡೆದ ನಂತರ ನಾವು ಪ್ರಕರಣ ದಾಖಲಿಸಿದ್ದು ದಿಃ 21-11-2023 ರಲ್ಲಿ. 4 ವರ್ಷಗಳ ತಡವಾಗಿ ಪ್ರಕರಣ ದಾಖಲಿಸಲು ಏನೂ ಕಾರಣ ಇರುವುದಿಲ್ಲ. ಸಾಕ್ಷಿಗೆ ನಿಪಿ.6 ನ್ನು ತೋರಿಸಲಾಗಿ ಇದನ್ನು ನಾವೇ ಹಾಜರುಪಡಿಸಿದ್ದು ಎಂದು ನುಡಿದಿರುತ್ತಾರೆ. 2019 ರಿಂದ 2023 ರವರೆಗೆ ಹಣವು ಜಮವಾಗಿದ್ದು ಇರುತ್ತದೆ. ಇದು ಯಾವುದು ಎಂದು ಕೇಳಿದಾಗ ಸಾಕ್ಷಿಯು ಅದು ಡಿವಿಡೆಂಟ್ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಪ್ರಕರಣ ದಾಖಲಿಸುವಾಗ ಆರೋಪಿತನು ಸಾಲದ ಅಸಲು ಮತ್ತು ಬಡ್ಡಿ ಎಷ್ಟಿತ್ತು ಎಂದು ತಿಳಿದಿದೆ. ಸಾಲದ ಉತ್ತಾರಿನಲ್ಲಿ 3,76,500/- ಖಾತಾ ಉತಾರಿನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು 2,40,000/- ಅಸಲು, ಉಳಿದದ್ದು ಬಡ್ಡಿ ಎಂದು ನುಡಿದಿರುತ್ತಾರೆ. ನಾವು ಖಾತಾ ಉತಾರಿನಲ್ಲಿ ಯಾವುದೇ ಬಡ್ಡಿಯನ್ನು ಹಾಜರುಪಡಿಸಿದ್ದು ಇಲ್ಲ ಎಂದರೆ ಸರಿ. ಚೆಕ್ಕನ್ನು ಪ್ರಕರಣ ದಾಖಲಿಸುವ ಪೂರ್ವದಲ್ಲಿ ಆರೋಪಿತನು ಚೆಕ್ಕನ್ನು ಬ್ಯಾಂಕಿಗೆ ತಂದು ಕೊಟ್ಟಿರುತ್ತಾನೆ. ಆರೋಪಿತನಿಗೆ ನಾವು ಸಾಲದ ನೋಟೀಸನ್ನು ನೀಡಿರುತ್ತೇವೆ. ನಾವು ಕೊಟ್ಟ ಕೊನೆಯ ನೋಟೀಸಿನ್ನು ಹಾಜರುಪಡಿಸಿದ್ದು ಇರುವುದಿಲ್ಲ. ಚೆಕ್ಕಿನ ಕುರಿತು ನಾವು ಸೆಪರೇಟ್ ಲೆಡ್ಜರನ್ನು ಇಟ್ಟದ್ದು ಇರುವುದಿಲ್ಲ. ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಲದ ಉತಾರಿನಲ್ಲಿ ಚೆಕ್ಕಿನಲ್ಲಿ ನಮೂದಿಸಿದ ಮೊತ್ತವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ತಡವಾಗಿ ಪ್ರಕರಣ ದಾಖಲಾಗಿದ್ದ ಬಗ್ಗೆ ಯಾವುದೇ ಕಾರಣ ನೀಡದೇ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd/-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**